ಬಹುಶಃ ಇಲ್ಲ. ಹಿಂದಿ ಲೇಖಕರು ಮುಸ್ಲಿಂ ಸಮಾಜದ ಆಗುಹೋಗುಗಳ ಬಗ್ಗೆ ಬರೆಯುತ್ತಾರೆ. ಬಾಬರಿ ಮಸೀದಿ ಕೆಡವಿದ ಪ್ರಕರಣವಿಟ್ಟುಕೊಂಡು ಹಿಂದಿಯಲ್ಲಿ ಮುಸ್ಲಿಮೇತರ ಲೇಖಕರೂ ಬರೆದರು. ದೂದನಾಥ ಸಿಂಗ್ 'ಆಖರಿ ಕಲಾಂ' ಕಾದಂಬರಿ ಈ ನಿಟ್ಟಿನಲ್ಲಿ ಮುಖ್ಯ ಕೃತಿ. ಹಿಂದಿಯಲ್ಲಿ ಮುಸ್ಲಿಂ ಮೂಲಭೂತವಾದದ ಬಗ್ಗೆ ಬರೆಯುವಷ್ಟೇ ಹಿಂದುತ್ವದ ಬಗೆ, ಕೋಮುವಾದಿ ರಾಷ್ಟ್ರೀಯತೆಯ ಬಗ್ಗೆ ಬರೆಯಲಾಗಿದೆ. ಹಿಂದಿ ಸಾಹಿತ್ಯದಲ್ಲಿ ಪ್ರಗತಿಪರ ಚಿಂತನೆ ಚೆನ್ನಾಗಿದೆ.

- ಹಿಂದಿಯಲ್ಲಿ ಬರೆಯುತ್ತಿರುವ ನಿಮಗೆ ಸಿಕ್ಕಿರುವ ಮಾನ್ಯತೆ ಎಂಥದು?

ಬಹಳ ದೊಡ್ಡ ಸ್ಥಾನ ಸಿಕ್ಕಿದೆ. ಹಿಂದಿಯ ಜನವಾದಿ ಲೇಖಕ ಸಂಘದ ಅಧ್ಯಕ್ಷನಾಗಿದ್ದೇನೆ. ನನ್ನ ಸಂಶೋಧನೆ ಕೂಡ 20ನೇ ಶತಮಾನದ ಉರ್ದು ಮತ್ತು ಹಿಂದಿ ಸಾಹಿತ್ಯದ ಪ್ರಗತಿಶೀಲ ಸಾಹಿತ್ಯದ ಮೇಲೆ ಇದೆ. 'ರಾವಿನದಿಯ ದಂಡೆಯ ಮೇಲೆ' ಭಾರತದ ಬಹಳಷ್ಟು ಭಾಷೆಗಳಿಗೆ ಅನುವಾದಗೊಂಡಿದೆ. ಈಗೀಗ 'ಗಾಂಧಿ@ಗೋಡ್ಸೆ ಡಾಟ್.ಕಾಂ' ಕೂಡ ಸ್ವೀಕಾರಗೊಂಡಿದೆ. ನನ್ನ ಕಾದಂಬರಿ 'ಸಾತಂವೇ ಆಸ್ಮಾನ್' ಬಹಳ ಜನಪ್ರಿಯವಾಗಿದೆ. ನನ್ನ ಸಣ್ಣಕತೆಯನ್ನು ಫೇಸ್‌ಬುಕ್ಕಿನಲ್ಲಿ ಹಾಕಿದರೆ ನೂರಾರು ಜನ ಶೇರ್ ಮಾಡುವರು. ಅವು ಲಕ್ಷಾಂತರ ಜನರಿಗೆ ತಲುಪುತ್ತವೆ.

- ನಿಮ್ಮನ್ನು ಮುಸ್ಲಿಂ ಓದುಗರು ಹೇಗೆ ಸ್ವೀಕರಿಸಿದ್ದಾರೆ?

ಉರ್ದುವಿನಲ್ಲಿ ನನ್ನ ಬರೆಹ ಕಡಿಮೆ. ಆದರೆ ಓದು ಬಲ್ಲ ಮುಸ್ಲಿಂ ಓದುಗರಿಂದ ಇದೇ ತರಹದ ಪ್ರತಿಕ್ರಿಯೆಯಿದೆ.

- ಮೂಲಭೂತವಾದ ಕೋಮುವಾದಗಳ ವಿರುದ್ಧ ಬರೆಯುತ್ತೀರಿ? ಕಹಿಯಾದ ಪ್ರತಿಕ್ರಿಯೆ ಎದುರಿಸಬೇಕಾಯಿತಾ?

ಮತೀಯವಾದಿಗಳಿಂದ ಬೈಗುಳ ಕೇಳಿದ್ದೇನೆ. ಕೊಲ್ಲುವ ಬೆದರಿಕೆ ಹಾಕಿದ್ದಾರೆ.

- 'ರಾವಿ ನದಿ ದಂಡೆ'ಯಲ್ಲಿ ಮುಸ್ಲಿಂ ಧಾರ್ಮಿಕ ಮೂಲಭೂತವಾದದ ವಿಮರ್ಶೆಯಿದೆ. ನಾಟಕ ಪ್ರದರ್ಶನಕ್ಕೆ ಅಡ್ಡಿ ಎದುರಿಸಬೇಕಾಯಿತಾ?

ದೆಹಲಿಯ ಜಾಮಿಯಾ ಮಸೀದಿಯ ಶಾಹಿ ಇಮಾಮರು, ಒಬ್ಬನನ್ನು ನಾಟಕ ನೋಡಲು ಕಳಿಸಿದ್ದರು. ಆದರೆ ನಾಟಕದಲ್ಲಿ ಬರುವ ಮೌಲವಿ ಆಡುವ ಎಲ್ಲ ಮಾತುಗಳೂ ಕುರಾನಿನ ಉಕ್ತಿಗಳೇ. 'ಭೂಮಿ ಮೇಲಿರುವವರ ಮೇಲೆ ಕರುಣೆ ತೋರಿಸು. ನಿನ್ನ ಮೇಲೆ ಆಕಾಶದಲ್ಲಿರುವವರು ಕರುಣೆ ತೋರಿಸುವರು'– ಇತ್ಯಾದಿ. ಅವರಿಗೆ ಏನೂ ದೋಷ ಹುಡುಕಲು ಸಾಧ್ಯವಾಗಲಿಲ್ಲ. ಆಕ್ಷೇಪಿಸಲು ಅವಕಾಶ ನೀಡದಂತೆ ನಾನು ಮೊದಲಿಂದಲೂ ಎಚ್ಚರವಹಿಸುತ್ತೇನೆ.

- 'ರಾವಿ ನದಿಯ ದಂಡೆ' ರಚನೆಗೆ ಪ್ರೇರಣೆಯೇನು?

ನಾನೊಂದು ಪುಸ್ತಕ ಓದುತ್ತಿದ್ದೆ. ಅದರಲ್ಲಿ ಒಬ್ಬ ಹಿಂದೂ ಮಹಿಳೆ ದೇಶವಿಭಜನೆ ಬಳಿಕ ಭಾರತಕ್ಕೆ ಬರಲು ಒಪ್ಪುವುದಿಲ್ಲ. ತನ್ನ ಸ್ವಂತ ಊರನ್ನು ಬಿಟ್ಟು ಹೋಗಲು ಇಚ್ಛಿಸುವುದಿಲ್ಲ. ಈ ಘಟನೆ ನನಗೆ ಕಾಡಿತು. ಹಾಗೆ ಕಂಡರೆ ಒಂದು ಕೃತಿಗೆ ಪ್ರೇರಣೆ ಹಲವು ಕಡೆಯಿಂದ ಬರುತ್ತದೆ.

- ಲೇಖಕರು ಸತ್ಯ ಹೇಳಿದರೆ ಬೆದರಿಕೆ ಎದುರಿಸಬೇಕು. ಸುಮ್ಮನಿದ್ದರೆ ಆತ್ಮವಂಚನೆ ಆಗುತ್ತದೆ. ಇದಕ್ಕಾಗಿ ನಮ್ಮ ಭಾಷೆ ಶೈಲಿ ಬದಲಿಸಿಕೊಳ್ಳಬೇಕೇ?

ನಾವು ಏನು ಹೇಳುತ್ತೇವೆಯೊ ಅದನ್ನು ಸಾಹಿತ್ಯದಲ್ಲಿ ಹೇಳುತ್ತೇವೆ. ಸಾಹಿತ್ಯದಲ್ಲಿ ಅದು ಕಲೆಯಾಗುತ್ತದೆ. ನೀವು ರೂಪಕ ಉಪಮೆಗಳನ್ನು ಬಳಸಿ ಹೇಳುವುದರಿಂದ ಅಡಗಿಸುವಿಕೆ ಇದ್ದೇ ಇರುತ್ತದೆ. ನಾವು ನಮ್ಮ ಅಭಿವ್ಯಕ್ತಿ ಎಷ್ಟು ಪರೋಕ್ಷವಾಗಿದೆ, ಎಷ್ಟು ಕಲಾತ್ಮಕವಾಗಿದೆ ಎಂಬ ಬಗ್ಗೆ ಆಲೋಚನೆ ಮಾಡಬೇಕು.